ಮಿಸ್.ನಂ.**32/2022**
ಪಿಡಬ್ಲ್ಯೂ .**1**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **27.03.2026.**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ ಬಿ.ಕೆ.ಜಿ.ಆರ್ ವಕೀಲರಿಂದ**

ನಾನು ಪಿ.ಯು.ಸಿ ತನಕ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ ಆದರೆ ಇಂಗ್ಲೀಷ್ ಸ್ವಲ್ಪ ಬರುತ್ತದೆ. ಈ ಕೇಸನ್ನು ಯಾವ ಉದ್ದೇಶಕ್ಕಾಗಿ ಹಾಕಿದ್ದೇನೆ ಎಂಬ ಬಗ್ಗೆ ನನಗೆ ಮಾಹಿತಿ ಇದೆ. ನಾನು **2016**ರಲ್ಲಿ ದಾವೆಯನ್ನು ಹಾಕಿದ್ದೆನು ಎಂದರೆ ಸರಿ. ನಾನು ನನ್ನ ಅರ್ಜಿಯಲ್ಲಿ **2016**ರಿಂದ ಪ್ರತಿ ವಾಯ್ದೆಗೆ ನ್ಯಾಯಾಲಯಕ್ಕೆ ಬರುತ್ತಿದ್ದೇನೆ ಎಂದು ಬರೆಸಿದ್ದೇನೆ ಎಂದರೆ ಸರಿ. ಆದ್ದರಿಂದ ನನಗೆ ಈ ಕೇಸಿನ ಬಗ್ಗೆ ಸಂಪೂರ್ಣ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಕೊರೋನ ಸಮಯದಲ್ಲಿ ನಾನು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ. **2019**ರಲ್ಲಿ ಕೊರೋನ ಪ್ರಾರಂಭವಾಗಿ **2020**ರಲ್ಲಿ ಮುಗಿದಿತ್ತು ಎಂದರೆ ಸರಿಯಲ್ಲ. ಕೊರೋನ ಸಮಯಲ್ಲಿ ನ್ಯಾಯಾಲಯಗಳ ಕಲಾಪ ಬಂದ್ ಆಗಿತ್ತು ಎಂದರೆ ಸರಿ. ನ್ಯಾಯಲಾಯಗಳು ಪ್ರಾರಂಭವಾದ ನಂತರ ವಕೀಲರ ಕಚೇರಿಗೆ ಹೋಗಿದ್ದೀರಾ? ಎಂದರೆ ಇಲ್ಲ. ಸಾಕ್ಷಿಯು ಮುಂದುವರೆದು ನನಗೆ ಹಣದ ಅಭಾವ ಇದ್ದ ಕಾರಣ ವಕೀಲರನ್ನು ಬೇಟಿಯಾಗಿಲ್ಲ ಎಂದು ಹೇಳುತ್ತಾರೆ. ಈ ಕೇಸಿನ ವಾಯ್ದೆಯ ದಿನಾಂಕವನ್ನು ತಿಳಿದುಕೊಂಡು ನ್ಯಾಯಾಲಯಕ್ಕೆ ಹಾಜರಾಗಿದ್ದೀರಾ? ಎಂದರೆ ಇಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಕೂಡ ಕೇಸಿಗೆ ಹಾಜರಾಗುತ್ತಿಲ್ಲ ಎಂದು ನಮ್ಮ ವಕೀಲರು ದಿನಾಂಕ.**08.09.2021**ರಲ್ಲಿ ನನಗೆ ರಿಟೈರ್ಮೆಂಟ್ ನೋಟಿಸ್ ಕಳುಹಿಸಿದ್ದರು ಎಂದರೆ ಸರಿ. ಸದರಿ ನೋಟಿಸ್ ನನಗೆ ನೋಂದಾಯಿತ ಅಂಚೆ ಮೂಲಕ ತಲುಪಿತ್ತು ಎಂದರೆ ಸರಿ. ಸದರಿ ನೋಟೀಸಿನಲ್ಲಿ ನಮ್ಮ ವಕೀಲರು ಕಚೇರಿಗೆ ಬರುವಂತೆ –

ತಿಳಿಸಿದ್ದರು. ಅದೇ ರೀತಿ ಸದರಿ ನೋಟೀಸಿನಲ್ಲಿ ಮುಂದಿನ ವಾಯ್ದೆಯ ದಿನಾಂಕವನ್ನು ನಮೂದು ಮಾಡಲಾಗಿತ್ತು ಎಂದರೆ ಸರಿ. ಸದರಿ ನೋಟೀಸನ್ನು ಪಡೆದುಕೊಂಡ ನಂತರ ನಾನು ವಕೀಲರನ್ನು ಬೇಟಿಯಾಗಿಲ್ಲ, ನ್ಯಾಯಾಲಯಕ್ಕೆ ಹಾಜರಾಗಿಲ್ಲ ಹಾಗೂ ನೋಟೀಸಿಗೆ ಪ್ರತ್ಯೂತ್ತರ ಕೊಟ್ಟಿಲ್ಲ ಎಂದರೆ ಸರಿ. ಅಸಲು ದಾವೆ ಸಂಖ್ಯೆ.**156/2016** ಪ್ರಕರಣವು ವಿಚಾರಣೆಗೆ ಹೋಗಿ ಎರಡು ವರ್ಷವಾಗಿತ್ತು ಎಂದರೆ ಸರಿ. ಸದರಿ ವಿಚಾರವನ್ನು ವಕೀಲರಿಗೆ ಫೋನ್ ಮಾಡಿ ತಿಳಿದುಕೊಂಡಿದ್ದೀರಾ? ಎಂದರೆ ಇಲ್ಲ. ನಾನು ವಕೀಲರನ್ನು ಸಂಪರ್ಕ ಮಾಡಿ ಕೇಸಿನ ವಿಚಾರವನ್ನು ತಿಳಿದುಕೊಂಡಿಲ್ಲ ಹಾಗೂ ನ್ಯಾಯಾಲಯಕ್ಕೆ ಹಾಜರಾಗದೇ ಇದ್ದ ಕಾರಣ ನ್ಯಾಯಾಲಯವು ದಿನಾಂಕ.**25.07.2022**ರಂದು ದಾವೆಯನ್ನು ವಜಾ ಮಾಡಿದೆ ಎಂದರೆ ಸರಿ. ಒಂದು ಬಾರಿ ನ್ಯಾಯಾಲಯದಲ್ಲಿ ಕೇಸನ್ನು ದಾಖಲು ಮಾಡಿದ ನಂತರ ವಕೀಲರ ಮೂಲಕ ಕೇಸಿನ ಬಗ್ಗೆ ವಿಚಾರ ತಿಳಿದುಕೊಳ್ಳುವುದು ನನ್ನ ಜವಾಬ್ದಾರಿ ಎಂದರೆ ಸರಿ. ದಿನಾಂಕ.**17.08.2022**ರಂದು ನಾನು ನ್ಯಾಯಾಲಯಕ್ಕೆ ಬಂದಿದ್ದೆನು ಎಂದು ನನ್ನ ಅರ್ಜಿಯಲ್ಲಿ ಬರೆಸಿದ್ದೇನೆ ಎಂದರೆ ಸರಿ. ಆ ದಿನ ಮೂಲ ದಾವೆ ಸಂಖ್ಯೆ.**177/2015**ರ ಪ್ರಕರಣಕ್ಕೆ ಹಾಜರಾಗಲು ನ್ಯಾಯಾಲಯಕ್ಕೆ ಬಂದಿದ್ದೆನು. ಈ ಕೇಸು ವಜಾ ಆಗಿರುವ ವಿಚಾರ ಯಾವಾಗ ತಿಳಿಯಿತು ಎಂದರೆ ಸಾಕ್ಷಿಯು ದಿನಾಂಕಃ**17.08.2022**ರಂದು ನಾನು ನ್ಯಾಯಾಲಯಕ್ಕೆ ಬಂದಾಗ ನಮ್ಮ ವಕೀಲರ ಮೂಲಕ ತಿಳಿದುಕೊಂಡಿರುತ್ತೇನೆ. ನಮ್ಮ ವಕೀಲರು ಈ ಪ್ರಕರಣದಿಂದ ನಿವೃತಿ ಹೊಂದಿದ ನಂತರ ನ್ಯಾಯಲಾಯದಿಂದ ನೋಟಿಸ್ ಕಳುಹಿಸಿದ್ದರು ಎಂದರೆ ಸರಿ. ಸದರಿ ನೋಟಿಸ್ ನನಗೆ ಜಾರಿಯಾಗಿತ್ತು ಎಂದರೆ ಸರಿ. ನೋಟಿಸ್ ಬಂದ ನಂತರ ಯಾವ ಕಾರಣಕ್ಕಾಗಿ ನ್ಯಾಯಾಲಯಕ್ಕೆ ಹಾಜರಾಗಲಿಲ್ಲ ಎಂದರೆ ಸಾಕ್ಷಿಯು ನನಗೆ ಆರೋಗ್ಯ ಸರಿ ಇರಲಿಲ್ಲ ಎಂದು ಹೇಳುತ್ತಾರೆ. ಈ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರು ಪಡಿಸಿದ್ದೀರಾ? ಎಂದರೆ ಇಲ್ಲ. ದಾವಾ ಆಸ್ತಿಯು ಪ್ರತಿವಾದಿಗಳಿಗೆ ಸೇರಿದ್ದ ಕಾರಣ ನನಗೆ ಸದರಿ ದಾವೆಯನ್ನು ನಡೆಸುವ ಅವಶ್ಯಕತೆ ಇರಲಿಲ್ಲ, ಆ ಕಾರಣದಿಂದ ನಾನು ನ್ಯಾಯಾಲಯಕ್ಕೆ

ಬರಲಿಲ್ಲ ಎಂದರೆ ಸರಿಯಲ್ಲ. ಕೊವಿಡ್ ಮುಗಿದ ನಂತರ ಯಾವ ಕಾರಣಕ್ಕಾಗಿ ನ್ಯಾಯಾಲಯಕ್ಕೆ ಹಾಜರಾಗಲಿಲ್ಲ ಎಂದರೆ ಸಾಕ್ಷಿಯು ನನ್ನ ಮಕ್ಕಳಿಗೆ ಆರೋಗ್ಯ ಸರಿ ಇರಲಿಲ್ಲ. ಅದೇ ರೀತಿ ನನ್ನ ಹೆಂಡತಿ ಗರ್ಭಿಣಿಯಾಗಿದ್ದಳು ಆ ಕಾರಣದಿಂದ ನ್ಯಾಯಾಲಕ್ಕೆ ಹಾಜರಾಗಲಿಲ್ಲ ಎಂದು ಹೇಳುತ್ತಾರೆ. ಈ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿದ್ದೀರಾ? ಎಂದರೆ ಹೌದು. ನಾನು ಈ ಕೇಸಿಗಾಗಿ ಎಲ್ಲಾ ದಾಖಲಾತಿಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.